ದಿನಾಂಕಃ 13.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ. ಎ.ಕೆ.ಕೆ ವಕೀಲರಿಂದಃ**

ಗೋಕಾಕದ ಸರ್ವೆ ನಂಬರ 24/8/4 ನೇದ್ದರ ಜಮೀನು ಮುಂಚೆ ರಫಿಯಾ ಮತ್ತೆರವರ ಜಮೀನು ಇರುತ್ತದೆಂದರೆ ನಿಜ. ಸದರಿ ಜಮೀನನ್ನು 3 ನೇ ಪ್ರತಿವಾದಿ ರೂ.20 ಲಕ್ಷಗಳಿಗೆ ಖರೀದಿಸಿರುತ್ತಾನೆಂದರೆ ಸಾಕ್ಷಿಯು ಎಲ್ಲರೂ ಸೇರಿ ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ಎಲ್ಲರೂ ಸೇರಿ ಖರೀದಿಸಿರುತ್ತೇವೆ ಎಂದು ತೋರಿಸಲು ಏನು ದಾಖಲೆಯನ್ನು ಹಾಜರುಪಡಿಸಿರುತ್ತೀರಿ? ಎಂದರೆ ಸಾಕ್ಷಿಯು ನಾವು ಜಂಟಿ ಕುಟುಂಬದಲ್ಲಿ ವಾಸಿಸುತ್ತೇವೆ ಎಂದು ನುಡಿಯುತ್ತಾರೆ. ನಾವೆಲ್ಲರೂ ಜಂಟಿ ಕುಟಜಂದಬಲ್ಲಿ ವಾಸವಾಗಿರುತ್ತೇವೆ ಎಂದು ದಾಖಲೆಯನ್ನು ಹಾಜರುಪಡಿಸಿರುತ್ತೀರಾ? ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಾವು 08 ಜನ ಸೇರಿ 20 ಲಕ್ಷ ರೂ.ಗಳನ್ನು ಸದರಿ ಜಮೀನನ್ನು ಖರೀದಿಸಲು ಕೊಟ್ಟಿರುತ್ತೇವೆ. ಸನ್ 2012 ರಲ್ಲಿ ಸದರಿ ಜಮೀನನ್ನು ಖರೀದಿಸಿರುತ್ತೇವೆ. ಯಾರ, ಎಷ್ಟು ಮೊತ್ತವನ್ನು ಕೊಟ್ಟಿರುತ್ತಾರೆಂದು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. 3ನೇ ಪ್ರತಿವಾದಿ ಸದರಿ ಜಮೀನಿನಲ್ಲಿ ಕಟ್ಟಡ ನಿರ್ಮಿಸಲು 1 ಕೊಟಿ 80 ಲಕ್ಷ ರೂ.ಗಳನ್ನು ಸೆಂಟ್ರಲ್ ಬ್ಯಾಂಕ, ಗೋಕಾಕನಿಂದ ಸಾಲ ಪಡೆದಿರುತ್ತಾರೆಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ.

ಅದೇ ರೀತಿ ಗೋಕಾಕದ ಸರ್ವೆ ನಂಬರ 861 ಮತ್ತು ಸರ್ವೆ ನಂಬರ 862 ನೇದ್ದವುಗಳಲ್ಲಿ 3 ನೇ ಪ್ರತಿವಾದಿ ಜಮೀನುಗಳನ್ನು ಖರೀದಿಸಿರುತ್ತಾನೆಂದರೆ ಸಾಕ್ಷಿಯು ಆತನೊಬ್ಬನೇ ಖರೀದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಗಳನ್ನು 3 ನೇ ಪ್ರತಿವಾದಿ ಯಾವ ವರ್ಷದಲ್ಲಿ ಎಷ್ಟು ಮೊತ್ತಕ್ಕೆ ಖರೀದಿಸಿರುತ್ತಾನೆಂದು

ಹೇಳಲು ಆಗುವುದಿಲ್ಲ ಆದರೆ ಜಂಟಿ ಕುಟುಂಬದ ಆದಾಯದಿಂದ ಖರೀದಿಸಿರುತ್ತೇವೆ. ಜಂಟಿ ಕುಟುಂಬದ ಆಸ್ತಿಗಳು ಎಷ್ಟು ಇರುತ್ತವೆ ಎಂದರೆ ಸಾಕ್ಷಿಯು ಸರ್ವೆ ನಂಬರಗಳನ್ನು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ಸನ್ 1982 ರಲ್ಲಿ ಅಸಲು ದಾವಾ ನಂಬರ 18/1982 ರಂತೆ ದಾವೆಯನ್ನು ದಾಖಲಿಸಿ ನ್ಯಾಯಾಲಯದಲ್ಲಿ ರಾಜೀ ಡಿಕ್ರಿ ಮಾಡಿಕೊಂಡಿರುವ ಸಂಗತಿ ಗೊತ್ತಿತ್ತದೆಯಾ? ಎಂದರೆ ಸಾಕ್ಷಿಯು ಅದನ್ನು ಖೊಟ್ಟಿಯಾಗಿ ಡಿಕ್ರಿ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಡಿಕ್ರಿಯು ಖೊಟ್ಟಿಯಾಗಿ ಪಡೆದುಕೊಂಡಿದ್ದು, ಅದನ್ನು ರದ್ದುಪಡಿಸಬೇಕು ಎಂದು ಪ್ರಸ್ತುತ ಪ್ರಕರಣದಲ್ಲಿ ಮಾಗಣಿ ಮಾಡಿಕೊಂಡಿರುವುದಿಲ್ಲ.

3 ನೇ ಪ್ರತಿವಾದಿಯು 4 ನೇ ಪ್ರತಿವಾದಿಯನ್ನು ಮದುವೆ ಮಾಡಿಕೊಂಡು 1 ನೇ ಪ್ರತಿವಾದಿಯಿಂದ ಬೇರೆಯಾಗಿ ವಾಸಿಸಸಲು ಪ್ರಾರಂಭಿಸಿರುತ್ತಾನೆಂದರ ಸಾಕ್ಷಿಯು ನಾವೆಲ್ಲರೂ ಒಂದೇ ಮನೆಯಲ್ಲಿ ವಾಸವಾಗಿದ್ದೇವು ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿ ಆತನ ಹೆಂಡತಿ ಹಾಗೂ ನಾವೆಲ್ಲರೂ ಒಂದೇ ಮನೆಯಲ್ಲಿ ವಾಸವಾಗಿದ್ದೇವು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿಗಳ ಪೈಕಿ ಅನುಕ್ರಮ ಸಂಖ್ಯೆ 1 ರಿಂದ 7 ನೇದ್ದವುಗಳನ್ನು 1 ನೇ ಪ್ರತಿವಾದಿಯ ಮಗ ಮೃತ ರಮೇಶ ಯಾವಾಗ ಖರೀದಿಸಿರುತ್ತಾನೆಂದರೆ ಸಾಕ್ಷಿಯು ಬಹಳ ಆಸ್ತಿಗಳು ಇದ್ದು, ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಆದರೆ ನನ್ನ ಗಂಡ ಆ ಬಗ್ಗೆ ಹೇಳಿದ್ದು, ಆತನು ಇಂಜನೀಯರ್ ಇದ್ದು, ತನ್ನ ಸ್ವಂತ ಆದಾಯದಿಂದ ಖರೀದಿಸಿರುತ್ತಾನೆಂದು ನುಡಿಯುತ್ತಾರೆ. ಆತನು ಬೆಂಗಳೂರಿನಲ್ಲಿ

ಇಂಜನೀಯರ್ ಆಗಿ ಕೆಲಸ ಮಾಡುತ್ತಿದ್ದನು. ಆತ ಇಂಜನೀಯರ್ ಕೆಲಸ ಮಾಡುತ್ತಿದ್ದ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ. ಸದರಿ ಮೃತ ರಮೇಶನಿಗೆ ವಾರ್ಷಿಕ 5-10 ಲಕ್ಷ ರೂ. ಆದಾಯ ಇತ್ತು. ನನ್ನ ಗಂಡನ ಹೇಳಿಕೆಯ ಮೇರೆಗೆ ನಾನು ಸದರಿ ಸಂಗತಿಯನ್ನು ಹೇಳುತ್ತಿದ್ದೇನೆ. ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ. ನಾನು ಆತನ ಆದಾಯದ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ. ಅದೇ ರೀತಿ ನ್ಯಾಯಾಲಯಕ್ಕೆ ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ ರಮೇಶ ಇಂಜನೀಯರ್ ಆಗಿರಲಿಲ್ಲ ಹಾಗೂ ಆತನಿಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಆತನ ಹೆಸರಿಗೆ ಖರೀದಿಸಿದ ಆಸ್ತಿಗಳ ಖರೀದಿ ಪತ್ರಗಳನ್ನು ನೋಡಿರುತ್ತೇನೆ. ಯಾವ ವರ್ಷದಲ್ಲಿ ಖರೀದಿಸಿರುತ್ತಾನೆಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ಮೇಲೆ ಹೇಳಿದ ಮೃತ ರಮೇಶನ ಹೆಸರಿನಲ್ಲಿ ಖರೀದಿಸಿ ದಾವಾ ಆಸ್ತಿಗಳಾದ ಅನುಕ್ರಮ ಸಂಖ್ಯೆ 1 ರಿಂದ 7 ನೇದ್ದವುಗಳನ್ನು 1 ನೇ ಪ್ರತಿವಾದಿ ಖರೀದಿಸಿರುತ್ತಾನೆಂದರೆ ಸರಿಯಲ್ಲ.

1ನೇ ಪ್ರತಿವಾದಿಯು ಗೋಕಾಕದಲ್ಲಿ ಪ್ರಖ್ಯಾತ ಕ್ರಿಮಿನಲ್ ನ್ಯಾಯವಾದಿಗಳು ಇರುತ್ತಾರೆಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಆದಾಯವು ಸಾಕಷ್ಟು ಇತ್ತು ಎಂದು ಅವರ ಮೇಲೆ ಆದಾಯ ತೆರಿಗೆ ಇಲಾಖೆಯವರು ರೇಡ್ ಸಹ ಮಾಡಿರಬಹುದು, ಅಂದರೆ ಸಾಕ್ಷಿಯು ಮಾಡಿರಬಹುದು ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಪೈಕಿ ಮಾಲದಿನ್ನಿ ಗ್ರಾಮದ ಸರ್ವೆ ನಂಬರ 664, ಸರ್ವೆ ನಂಬರ 876, ಸರ್ವೆ ನಂಬರ 1030, ಸರ್ವೆ ನಂಬರ 1029ಎ, ಸರ್ವೆ ನಂಬರ 1028, ಸರ್ವೆ ನಂಬರ 1122, ಸರ್ವೆ ನಂಬರ 1123, ಸರ್ವೆ ನಂಬರ 921ರ ಜಮೀನುಗಳು

ಯಾರಿಗೆ ಸಂಬಂಧಿಸಿರುತ್ತವೆ ಎಂದರೆ ಸಾಕ್ಷಿಯು ಹಿರಿಯರಿಂದ ಬಂದ ಆಸ್ತಿಗಳ ಉತ್ಪನ್ನದಿಂದ ಖರೀದಿಸಿದ ಜಮೀನುಗಳು ಇರುತ್ತವೆ ಎಂದು ನುಡಿಯುತ್ತಾರೆ.

1ನೇ ಪ್ರತಿವಾದಿಯ ತಂದೆ- ತಾಯಿ ಇಬ್ಬರೂ ತೀರಿಕೊಂಡಿರುತ್ತಾರೆಂದರೆ ನಿಜ. ಅವರ ಹೆಸರಿಗೆ ಕೊಪ್ಪ ಗ್ರಾಮದಲ್ಲಿ ಜಮೀನುಗಳು ಇದ್ದವು. ಅವುಗಳನ್ನು 1 ನೇ ಪ್ರತಿವಾದಿ ಹಾಗೂ ಆತನ ಮಕ್ಕಳು ಮಾರಾಟ ಮಾಡಿ ಮಾಲದಿನ್ನಿ ಗ್ರಾಮದಲ್ಲಿ ಜಮೀನುಗಳನ್ನು ಖರೀದಿಸಿರುತ್ತಾರೆ. ಯಾವ ವರ್ಷದಲ್ಲಿ ಮಾರಾಟ ಮಾಡಿರುತ್ತಾರೆ ಹಾಗೂ ಯಾವ ವರ್ಷದಲ್ಲಿ ಜಮೀನುಗಳನ್ನು ಖರೀದಿಸಿರುತ್ತಾರೆಂದು ನನಗೆ ಹೇಳಲು ಆಗುವುದಿಲ್ಲ.

1 ನೇ ಪ್ರತಿವಾದಿ ಆತನ ತಂದೆಗೆ ಒಬ್ಬನೇ ಮಗ ಎಂದರೆ ನಿಜ. 1 ನೇ ಪ್ರತಿವಾದಿಗೆ ಲಕ್ಷ್ಮವ್ವ ಎಂಬ ಸಹೋದರಿ ಇದ್ದು, ಅವಳು ತೀರಿಕೊಂಡಿದ್ದು, ಯಾವಾಗ ತೀರಿಕೊಂಡಿರುತ್ತಾಳೆಂದು ನನಗೆ ಹೇಳಲು ಆಗುವುದಿಲ್ಲ. 1ನೇ ಪ್ರತಿವಾದಿಯ ತಾಯಿಯ ಹೆಸರು ಶಿವಕ್ಕ. ಸದರಿ ಮೇಲೆ ಹೇಳಿದ ಮಾಲದಿನ್ನಿ ಗ್ರಾಮದಲ್ಲಿರುವ ಜಮೀನುಗಳನ್ನು ಖರೀದಿಸಿದ ನಂತರ ಲಕ್ಷ್ಮವ್ವ ತೀರಿಕೊಂಡಿರುತ್ತಾಳೆ. 1ನೇ ಪ್ರತಿವಾದಿ ಯ ತಂದೆ ರಾಯಪ್ಪ, ತಾಯಿ ಶಿವಕ್ಕ ಹಾಗೂ ಸಹೋದರಿ ಲಕ್ಷ್ಮವ್ವ ತೀರಿಕೊಂಡ ನಂತರ ರಾಯಪ್ಪನ ಆಸ್ತಿಗಳಿಗೆ 1ನೇ ಪ್ರತಿವಾದಿ ಒಬ್ಬನೇ ವಾರಸುದಾರನು ಆಗಿರುತ್ತಾನೆಂದರೆ ಸರಿಯಲ್ಲ. ರಾಯಪ್ಪನ ಹೆಸರಿನಲ್ಲಿ ಇದ್ದ ಜಮೀನುಗಳನ್ನು 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾನೆಂದರೆ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ ರಾಯಪ್ಪ ತೀರಿಕೊಂಡ ನಂತರ ಆತನ ಎಲ್ಲಾ ಆಸ್ತಿಗಳಿಗೆ 1 ನೇ ಪ್ರತಿವಾದಿ ಒಬ್ಬನೇ ಮಾಲೀಕನಿದ್ದು, ನಮಗೆ ಯಾರಿಗೂ ಸದರಿ ಆಸ್ತಿಗಳಲ್ಲಿ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ನನ್ನ ಗಂಡ ಮೃತ ಆನಂದ ಶೇರ ಮಾರ್ಕೆಟಿಂಗ ವ್ಯವಹಾರದ ಜೊತೆ ಒಕ್ಕಲುತನ ಸಹ ಮಾಡುತ್ತಿದ್ದನು. ನನ್ನ ಗಂಡ ಶೇರ ಮಾರ್ಕೆಟಿಂಗ ವ್ಯವಹಾರ ಮಾಡುತ್ತಿದ್ದ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ. ಶೇರ ಮಾರ್ಕೆಟಿಂಗ ವ್ಯವಹಾರವನ್ನು 10 ನೇ ಪ್ರತಿವಾದಿ ಮಾಡುತ್ತಿದ್ದನು ಎಂದರೆ ಸಾಕ್ಷಿಯು ಆತ ಮತ್ತು ನನ್ನ ಗಂಡ ಇಬ್ಬರೂ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಗಂಡ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮದ್ಯ ವ್ಯಸನಿಯಾಗಿದ್ದು, ಯಾವಾಗಲೂ ಕುಡಿಯುತ್ತಾ ತಿರುಗಾಡುತ್ತಿದ್ದನು ಎಂದರೆ ಸರಿಯಲ್ಲ. ಕೆಲವು ಬಾರಿ ಸಾರಾಯಿ ಅಂಗಡಿಯಿಂದ ನಾನೇ ಮನೆಗೆ ಕರೆದುಕೊಂಡು ಬಂದಿರುತ್ತೇನೆಂದರೆ ಸರಿಯಲ್ಲ. ಆತ ಕುಡಿತದ ಚಟಕ್ಕೆ ಬಲಿಯಾಗಿ ತೀರಿಕೊಂಡಿರುತ್ತಾನೆಂದರೆ ಸರಿಯಲ್ಲ. ಆತ ಮದ್ಯ ಸೇವಿಸುತ್ತಿದ್ದುದರಿಂದ ಸಿರೋಸಿಸ್ ಖಾಯಿಲೆಯಿಂದ ಬಳಲಿ ತೀರಿಕೊಂಡಿರುತ್ತಾನೆಂದರೆ ಸರಿಯಲ್ಲ. ನನ್ನ ಗಂಡನಿಗೆ ಲಿವರ್ ಇನಪೆಕ್ಸನ್ ಆಗಿ ತೀರಿಕೊಂಡಿರುತ್ತಾನೆ. ಮದ್ಯ ಸೇವಿಸುತ್ತಿದ್ದುದರಿಂದ ಲಿವರ್ ಇನಪೆಕ್ಸನ್ ಅಗಿರುತ್ತದೆಂದರೆ ಸರಿಯಲ್ಲ.

3 ನೇ ಪ್ರತಿವಾದಿಯ ಹೆಸರಿನಲ್ಲಿರುವ ಳನ್ನು ಹೊರತುಪಡಿಸಿ ಉಳಿದೆಲ್ಲಾ ಆಸ್ತಿಗಳು 1 ನೇ ಪ್ರತಿವಾದಿಯ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. ಮೃತ ರಮೇಶ ಇಂಜನೀಯರ್ ವೃತ್ತಿಯನ್ನು ಮಾಡುತ್ತಿದ್ದು , ಅದರಿಂದ ಆತನಿಗೆ ವಾರ್ಷಿಕ 5-10 ಲಕ್ಷ ರೂ. ಆದಾಯಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸನ್ 1982 ರಲ್ಲಿ ಆದ ರಾಜಿ ಡಿಕ್ರಿ ಸರಿ ಇದ್ದುದರಿಂದ ನಾವು ಇವತ್ತಿಗೂ ಅದನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಇರದೇ ಇದ್ದರೂ ಸಹ ಪ್ರತಿವಾದಿಯರಿಗೆ ತೊಂದರೆ ಕೊಡುವ

ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ- 10 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ